# ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ದೀಪಾವಳೀ ಆಚರಣೆ — 3** | **2** |
| **ನರಕಚತುರ್ದಶೀ** | **2** |
| **ಅಂದು ಮಾಡಬೇಕಾದ ಐದು ಸತ್ಕರ್ಮಗಳು** | **4** |
| **ಅಭ್ಯಂಗ** | **5** |
| ಅಭ್ಯಂಗ ಎಂದರೇನು? | 5 |
| ಏಕೆ ಮಾಡಬೇಕು? | 6 |
| ಎಳ್ಳೆಣ್ಣೆಯೇ ಏಕೆ? | 7 |
| ಸೂರ್ಯಚಂದ್ರರಿಬ್ಬರೂ ಸ್ವಾತಿಯಲ್ಲಿದ್ದರೆ ಮಹೈಶ್ವರ್ಯ | 8 |
| ಯಾರು ಮಾಡಬೇಕು? | 10 |
| ಯಾರು ಮಾಡಬಾರದು? | 13 |
| **ಅಭ್ಯಂಗದ ಕಾಲ** | **16** |
| **ಅಭ್ಯಂಗದ ಕ್ರಮ** | **19** |
| **ಸ್ನಾನ ಮಾಡುವ ಕ್ರಮ** | **21** |
| **ಮಹಾಲಕ್ಷ್ಮಿಯ ವಿಶೇಷ ಪೂಜೆ** | **23** |

# ವಿಶ್ವನಂದಿನಿ ಲೇಖನಮಾಲೆ — 206

## ದೀಪಾವಳೀ ಆಚರಣೆ — 3

## ನರಕಚತುರ್ದಶೀ

ದೀಪಾವಳಿಯ ಮೊದಲ ಎರಡು ದಿವಸಗಳ ಕಾರ್ಯವನ್ನು ತಿಳಿದೆವು[1].
ದೀಪಾವಳಿಯ ಮೂರನೆಯ ದಿವಸಕ್ಕೆ ನರಕಚತುರ್ದಶೀ ಎಂದು ಹೆಸರು.

ನರಕದ ಭಯವನ್ನು ಕಳೆದುಕೊಳ್ಳಲು ಅಭ್ಯಂಗಸ್ನಾನ, ಯಮತರ್ಪಣ ಮತ್ತು ದೀಪಪ್ರಜ್ವಾಲನಗಳನ್ನು ಮಾಡುವದರಿಂದ ಈ ದಿವಸಕ್ಕೆ ನರಕಚತುರ್ದಶೀ ಎಂಬ ಹೆಸರಿದೆ ಎನ್ನುವದು ಧರ್ಮಶಾಸ್ತ್ರಗಳ ವಚನಗಳಿಂದ

[1] VNA155 ಮತ್ತು VNA156 ಲೇಖನಗಳಲ್ಲಿ.

ಸ್ಪಷ್ಟವಾಗುತ್ತದೆ. ಮುಂದೆ ಉದಾಹರಿಸುವ ವಚನಗಳಿಂದ ಇದು ಸ್ಪಷ್ಟವಾಗುತ್ತದೆ.

ಶ್ರೀ ಸ್ಮೃತಿಮುಕ್ತಾವಲಿಕೃಷ್ಣಾಚಾರ್ಯರು

**ನರಕಶ್ಚ ಹತೋ ದೈತ್ಯಃ**
**ತಿಥೌ ತಸ್ಯಾಂ ತತೋ ಹಿ ಸಾ ।**
**ಖ್ಯಾತಾ ಲೋಕೇ ಮಹಾಪುಣ್ಯಾ**
**ನರಕಾಖ್ಯಚತುರ್ದಶೀ ॥**

ಎಂಬ ಸ್ಮೃತಿವಾಕ್ಯವನ್ನು ಉದಾಹರಿಸಿ ಕಾರ್ತಿಕ ಕೃಷ್ಣ ಚತುರ್ದಶಿಯಂದು ಶ್ರೀಕೃಷ್ಣ ನರಕಾಸುರನನ್ನು ಕೊಂದದ್ದರಿಂದ ಇದಕ್ಕೆ ನರಕಚತುರ್ದಶಿ ಎಂಬ ಹೆಸರಿದೆ ಎಂದು ತಿಳಿಸುತ್ತಾರೆ.

## ಅಂದು ಮಾಡಬೇಕಾದ ಐದು ಸತ್ಕರ್ಮಗಳು

ನರಕಚತುರ್ದಶಿಯಂದು ಮಾಡಬೇಕಾದ ಸತ್ಕರ್ಮಗಳು ಐದು —

**ಚಂದ್ರೋದಯದ ಸಮಯದಲ್ಲಿ ಅಭ್ಯಂಗ.**

**ಆ ನಂತರ ಹೆಣ್ಣುಮಕ್ಕಳಿಂದ ಆರತಿ.**

**ಪೂಜಾಸಮಯದಲ್ಲಿ ಮಹಾಲಕ್ಷ್ಮೀದೇವಿಗೆ ವಿಶೇಷ ಪೂಜೆ, ಆರತಿ.**

**ಪೂಜಾನಂತರದಲ್ಲಿ ಯಮತರ್ಪಣ.**

**ಸೂರ್ಯಾಸ್ತದ ನಂತರ ಕತ್ತಲು ಆವರಿಸಿದಾಗ ನಾಲ್ಕು ಬತ್ತಿಗಳ ದೀಪಸಮರ್ಪಣೆ.**

# ಅಭ್ಯಂಗ

## ಅಭ್ಯಂಗ ಎಂದರೇನು?

ತಲೆಗೆ, ಮೈಗೆ ಎಣ್ಣೆ ಹಚ್ಚಿಕೊಂಡು ಬಿಸಿನೀರಿನಲ್ಲಿ ಮಾಡುವ ಸ್ನಾನವನ್ನು ಅಭ್ಯಂಗ ಅಥವಾ ಅಭ್ಯಂಜನ ಎನ್ನುತ್ತಾರೆ. ಕನ್ನಡದಲ್ಲಿ ಎರೆಯುವದು ಎನ್ನುತ್ತಾರೆ.

> ಮೂರ್ಧ್ನಿ ದತ್ತಂ ಯದಾ ತೈಲಂ
> ಭವೇತ್ ಸರ್ವಾಂಗಸಂಗತಮ್ ।
> ಸ್ರೋತೋಭಿಸ್ತರ್ಪಯೇದ್ ಬಾಹೂ
> ಸ ಚಾಭ್ಯಂಗ ಉದಾಹೃತಃ ।

ತಲೆಗೆ ಎಣ್ಣೆ ಹಚ್ಚಬೇಕು. ನೆತ್ತಿಯ ಚರ್ಮ ಅದನ್ನು ಹೀರಲಾರಂಭಿಸುತ್ತದೆ. ಹೀರಿದ ನಂತರವೂ ಹಚ್ಚಬೇಕು. ಆಗ ಆ ಎಣ್ಣೆ ತಲೆಯಿಂದ ಕೆಳಗಿಳಿಯುತ್ತ ಬರುತ್ತದೆ. ಆಗ ಆ ಎಣ್ಣೆಯಿಂದ ಭುಜ, ಕೈ, ಮೈಗಳನ್ನು ಮರ್ದನ ಮಾಡಬೇಕು. ಇದನ್ನು ಅಭ್ಯಂಗ ಎನ್ನುತ್ತಾರೆ ಎಂದು ಆಯುರ್ವೇದದ ಗ್ರಂಥ ರಾಜವಲ್ಲಭ ತಿಳಿಸುತ್ತದೆ.

ತ್ರಯೋದಶಿಯಂದು ಗಂಗೆಪೂಜೆಯನ್ನು ಮಾಡಿಯಾಗಿದೆ, ಆ ಪವಿತ್ರನೀರಿನಿಂದ ಚತುರ್ದಶಿಯಂದು ಅಭ್ಯಂಗ ಮಾಡಬೇಕು.

## ಏಕೆ ಮಾಡಬೇಕು?

ಈ ಪ್ರಶ್ನೆಗೆ ಭವಿಷ್ಯೋತ್ತರ ಪುರಾಣ ಉತ್ತರ ನೀಡುತ್ತದೆ.

**ಕಾರ್ತಿಕೇ ಕೃಷ್ಣಪಕ್ಷೇ ತು[2]**
**ಚತುರ್ದಶ್ಯಾಮಿನೋದಯೇ ।**

---

[2] ಯಾವುದೇ ಕೃಷ್ಣಪಕ್ಷದ ಕುರಿತಾದ ವ್ರತವನ್ನು ಪುರಾಣಗಳು ಎರಡು ಹೆಸರಿನಿಂದ ಕರೆಯುತ್ತವೆ. ಯಾವ ಕೃಷ್ಣಪಕ್ಷಕ್ಕೆ ಆ ಎರಡೂ ಹೆಸರಿವಿಯೋ ಆ ಕೃಷ್ಣಪಕ್ಷ ಎಂದು ಸಿದ್ಧವಾಗುತ್ತದೆ. ಚಾಂದ್ರ ಶ್ರಾವಣದಲ್ಲಿಯೇ ಕೃಷ್ಣ ಹುಟ್ಟಿದ್ದು ಎನ್ನುವದನ್ನು ತಿಳಿಸುದವಕ್ಕಾಗಿಯೇ ಎರಡು ಹೆಸರಿನಿಂದ ಉಲ್ಲೇಖವಿದೆ ಎಂದು ಬನ್ನಂಜೆ ವಿಮರ್ಶ ಪುಸ್ತಕದಲ್ಲಿ ಪ್ರತಿಪಾದಿಸಿದ್ದೇನೆ. ಅದಕ್ಕೆ ಇಲ್ಲಿಯೂ ಮತ್ತೊಂದು ಪ್ರಮಾಣವಿದೆ ನೋಡಿ. ನರಕಚತುರ್ದಶಿಯನ್ನು ಕಾರ್ತೀಕ ಕೃಷ್ಣ ಎಂದು ಒಂದು ಪುರಾಣ ಕರೆಯುತ್ತದೆ. ಮತ್ತೊಂದು ಪುರಾಣ ಆಶ್ವೀನಕೃಷ್ಣ ಎಂದು ಕರೆಯುತ್ತದೆ. ಆಶ್ವೀನಕೃಷ್ಣ ಮತ್ತು ಕಾರ್ತೀಕಕೃಷ್ಣ ಎಂಬ ಎರಡೂ ಹೆಸರರಿರುವದು ಆಶ್ವೀನಕೃಷ್ಣಕ್ಕೇ ಆದ್ದರಿಂದ ಆಶ್ವೀನ ಕೃಷ್ಣ ಚತುರ್ದಶಿಯೇ ನರಕಚತುರ್ದಶಿ ಎಂದು ನಿರ್ಣಯವಾಗುತ್ತದೆ. ಪುರಾಣಗಳ ಈ ಕ್ರಮ ಗೊತ್ತಿರದ ಬನ್ನಂಜೆ ಭಾದ್ರಪದದಲ್ಲಿಯೇ ಕೃಷ್ಣ ಹುಟ್ಟಿದ್ದು ಎಂದು ವಾದಿಸಿ ನಿರುತ್ತರರಾಗಿದ್ದಾರೆ.

**ಅವಶ್ಯಮೇವ ಕರ್ತವ್ಯಂ**
**ಸ್ನಾನಂ ನರಕಭೀರುಭಿಃ ।**

ಪದ್ಮಪುರಾಣದಲ್ಲಿ ಎಳ್ಳೆಣ್ಣೆಯಿಂದಲೇ ಸ್ನಾನ ಮಾಡಬೇಕು ಎಂಬ ವಿಶೇಷವಿದೆ —

**ಆಶ್ವಯುಕ್-ಕೃಷ್ಣಪಕ್ಷಸ್ಯ**
**ಚತುರ್ದಶ್ಯಾಂ ವಿಧೂದಯೇ ।**
**ತಿಲತೈಲೇನ ಕರ್ತವ್ಯಂ**
**ಸ್ನಾನಂ ನರಕಭೀರುಣಾ ॥**

ನರಕವಾಗಬಾರದು ಎಂಬ ಅಪೇಕ್ಷೆಯುಳ್ಳ, ನರಕಭೀರುಗಳಾದ ಸಜ್ಜನರು ಆಶ್ವೀನ ಕೃಷ್ಣ ಚತುರ್ದಶಿಯಂದು ಪ್ರಾತಃಕಾಲದಲ್ಲಿ ಚಂದ್ರೋದಯದ ಸಮಯದಲ್ಲಿ ಎಳ್ಳೆಣ್ಣೆಯಿಂದ ಅಭ್ಯಂಗವನ್ನು ಮಾಡಬೇಕು.

## ಎಳ್ಳೆಣ್ಣೆಯೇ ಏಕೆ?

**ನರಕಚತುರ್ದಶಿಯಂದು ಎಳ್ಳೆಣ್ಣೆಯಲ್ಲಿ ಮಹಾಲಕ್ಷ್ಮೀದೇವಿಯ ಸನ್ನಿಧಾನವಿರುತ್ತದೆ ಮತ್ತು**

## ನೀರಿನಲ್ಲಿ ಗಂಗೆಯ ಸನ್ನಿಧಾನವಿರುತ್ತದೆ

ಇವರೆಡರಿಂದ ಪ್ರಾತಃಕಾಲದಲ್ಲಿ ಸ್ನಾನ ಮಾಡುವವನು ಯಮಲೋಕವನ್ನು ಕಾಣುವದಿಲ್ಲ ಎಂದು ಶಾಸ್ತ್ರ ತಿಳಿಸುತ್ತದೆ —

> **"ತೈಲೇ ಲಕ್ಷ್ಮೀಃ ಜಲೇ ಗಂಗಾ ದೀಪಾವಲ್ಯಾಶ್ಚತುರ್ದಶೀಮ್"**

> **"ಪ್ರಾತಃಸ್ನಾನಂ ತು ಯಃ ಕುರ್ಯಾತ್ ಯಮಲೋಕಂ ನ ಪಶ್ಯತಿ"**

ಹಾಗೆಯೇ **"ಸುಂಗಂಧತೈಲೇನ ವಿಭೂತಿಕಾಮೈಃ"** ಎಂಬ ವಚನವಿರುವದರಿಂದ ಎಳ್ಳೆಣ್ಣೆಯನ್ನು ಶುದ್ಧ ವಸ್ತುಗಳಿಂದ ಸುಗಂಧವನ್ನಾಗಿ ಮಾಡಿ ಅಭ್ಯಂಗ ಮಾಡಿದರೆ ಉತ್ತಮ ಐಶ್ವರ್ಯ ದೊರೆಯತ್ತದೆ.

## ಸೂರ್ಯಚಂದ್ರರಿಬ್ಬರೂ ಸ್ವಾತಿಯಲ್ಲಿದ್ದರೆ ಮಹೈಶ್ವರ್ಯ

ನರಕಚತುರ್ದಶಿಯಂದು ಸಾಮಾನ್ಯವಾಗಿ ಸೂರ್ಯ ಸ್ವಾತಿನಕ್ಷತ್ರದಲ್ಲಿರುತ್ತಾನೆ. ಆ ದಿವಸ ಚಂದ್ರನೂ

ಸ್ವಾತಿನಕ್ಷತ್ರದಲ್ಲಿದ್ದರೆ ಅಂದು ಅಭ್ಯಂಗ ಮಾಡುವದರಿಂದ ಮಹತ್ತರ ಐಶ್ವರ್ಯ ಪ್ರಾಪ್ತಿಯಾಗುತ್ತದೆ ಎಂದು ಸ್ಮೃತಿದರ್ಪಣ ತಿಳಿಸುತ್ತದೆ —

**ಚತುರ್ದಶೀ ಚಾಶ್ವಯುಜಸ್ಯ ಕೃಷ್ಣ**
**ಸ್ವಾತ್ಯರ್ಕ್ಷಯುಕ್ತಾ ಚ ಭವೇತ್ ಪ್ರಭಾತೇ**
**ಸ್ನಾನಂ ಸಮಭ್ಯಜ್ಯ ನರೈಸ್ತು ಕಾರ್ಯಂ**
**ಸುಗಂಧತೈಲೇನ ವಿಭೂತಿಕಾಮೈಃ**

ಶ್ರೀ ಕೃಷ್ಣಾಚಾರ್ಯಗುರುಗಳೂ ಸಹಿತ ಈ ಮಾತನ್ನು ತಮ್ಮ ಸ್ಮೃತಿಮುಕ್ತಾವಳಿಯಲ್ಲಿ ತಿಳಿಸುತ್ತಾರೆ —

**ಸ್ವಾತೀಸ್ಥಿತೇ ರವಾವಿಂದುಃ**
**ಯದಿ ಸ್ವಾತಿಗತೋ ಭವೇತ್[3] …**
**ಸರ್ವಸಂಪದಮಾಪ್ನೋತಿ**
**ಲಕ್ಷ್ಮೀಸ್ತತ್ರೈವ ತಿಷ್ಠತಿ**

[3] ಸಂಸ್ಕೃತ ಅಭ್ಯಾಸಿಗಳ ಗಮನಕ್ಕೆ — ಸ್ವಾತಿನಕ್ಷತ್ರಕ್ಕೆ ಪುಲ್ಲಿಂಗ ಹಾಗೂ ಸ್ತ್ರೀಲಿಂಗ ಎರಡೂ ರೂಪವಿದೆ. ಹೀಗಾಗಿ ಸ್ವಾತೀಸ್ಥಿತೇ ಮತ್ತು ಸ್ವಾತಿಗತೋ ಎಂಬ ಎರಡೂ ಪ್ರಯೋಗಗಳು ಸರಿ.

## ಯಾರು ಮಾಡಬೇಕು?

ನರಕಚತುರ್ದಶಿಯಂದು ಎಲ್ಲ ವರ್ಣದವರೂ, ಎಲ್ಲ ಆಶ್ರಮದವರೂ ಅಭ್ಯಂಗವನ್ನು ಮಾಡಲೇಬೇಕು. ನರಕಚತುರ್ದಶಿಯಿರುವ ದಿವಸ ದೋಷಯುಕ್ತವಾಗಿದ್ದರೂ ಅಭ್ಯಂಗ ಮಾಡಲೇಬೇಕು.

ವಸ್ತುಸ್ಥಿತಿಯಲ್ಲಿ, ಸಂನ್ಯಾಸಿಗಳಿಗೆ, ವಿಧವೆಯರಿಗೆ, ಬ್ರಹ್ಮಚಾರಿಗಳಿಗೆ ಅಭ್ಯಂಗ ನಿಷಿದ್ಧ. ತಂದೆ ತಾಯಿಗಳು ಸತ್ತ ಒಂದು ವರ್ಷದಲ್ಲಿ ಅಭ್ಯಂಗ ಮಾಡಬಾರದು. ಅಮಾವಾಸ್ಯೆಯಂದು, ವ್ಯತೀಪಾತವಿದ್ದಾಗ, ಸಂಕ್ರಾಂತಿಯಲ್ಲಿ, ನಿಂದ್ಯವಾದ ದಿವಸಗಳಲ್ಲಿ, ಕ್ಷಯತಿಥಿ ಇದ್ದಾಗ ಅಭ್ಯಂಗ ಮಾಡಬಾರದು.

ಆದರೆ ಈ ಯಾವ ನಿಯಮಗಳೂ ನರಕಚತುರ್ದಶಿಗೆ ಅನ್ವಯಿಸುವದಿಲ್ಲ. ನರಕಚತುರ್ದಶಿಯಂದು ಸಂನ್ಯಾಸಿ, ವಿಧವೆ, ಬ್ರಹ್ಮಚಾರಿಯರೂ ಸಹ ಅಭ್ಯಂಗವನ್ನು ಮಾಡಲೇಬೇಕು ಎಂದು ವರಾಹಪುರಾಣದ

ವಚನವಿದೆ ಎಂದು ಶ್ರೀ ಸ್ಮೃತಿಮುಕ್ತಾವಲಿಯಲ್ಲಿ ಕೃಷ್ಣಾಚಾರ್ಯರು ತಿಳಿಸುತ್ತಾರೆ.

ದರ್ಶೇ ಪಾತೇ ಚ ಸಂಕ್ರಾಂತೌ
ನಿಂದ್ಯವಾರೇ ದಿನಕ್ಷಯೇ ।
ತೈಲಾಭ್ಯಂಗೋ ನ ದೋಷಾಯ
ಪ್ರಾತಃ ಪಾಪಾಪನುತ್ತಯೇ ।

ಪಾಪಗಳ ಪರಿಹಾರಕ್ಕಾಗಿ ಮಾಡುವ ನರಕಚತುರ್ದಶಿಯ ಅಭ್ಯಂಗವನ್ನು ನಿಷಿದ್ಧ ದಿವಸಗಳಲ್ಲಿ ಮಾಡಿದರೂ ದೋಷವಿಲ್ಲ.

ಆದರೆ, ತೈಲಸ್ನಾನವನ್ನು ಮಾಡುವದರಿಂದ ಸಂನ್ಯಾಸಧರ್ಮಕ್ಕೆ, ವಿಧವಾಧರ್ಮಕ್ಕೆ, ಅಥವಾ ಕಾರ್ತಿಕಾದಿವ್ರತವನ್ನು ಮಾಡುತ್ತಿರುವ ವ್ರತಗಳಿಗೆ[4] ಭಂಗವುಂಟಾಗುವದಿಲ್ಲವೇ ಎಂದರೆ ಇಲ್ಲ ಎಂದು ಶಾಸ್ತ್ರಗಳು ಉತ್ತರವನ್ನು ನೀಡುತ್ತವೆ —

ನಹಿ ವ್ರತಂ ವಿಲುಪ್ಯೇತ

[4] ಕಾರ್ತಿಕದಲ್ಲಿ ತೈಲಸ್ನಾನವರ್ಜನ, ಭೂಮಿಶಯನ ಮುಂತಾದ ವ್ರತಗಳಿವೆ.

**ಕಾರ್ತಿಕವ್ರತಿನಾಂ ನೃಣಾಮ್**
**ವಿಧವಾನಾಂ ಯತೀನಾಂ ಚ**
**ತಸ್ಯಾಂ ತೈಲಸ್ಯ ಸೇವನಾತ್**

ನರಕಚತುರ್ದಶಿಯಂದು ಎಣ್ಣೆಸ್ನಾನ ಮಾಡುವದರಿಂದ ಯತಿಗಳಿಗೆ, ವಿಧವೆಯರಿಗೆ ಮತ್ತು ವ್ರತಿಗಳಿಗೆ ವ್ರತಭಂಗವುಂಟಾಗುವದಿಲ್ಲ.

ಅಷ್ಟೇ ಅಲ್ಲ, ಯಾರು ಈ ದಿವಸ ತೈಲಸ್ನಾನವನ್ನು ಮಾಡುವದಿಲ್ಲ ಅವರಿಗೆ ಯಾವ ದುಷ್ಫಲ ಉಂಟಾಗುತ್ತದೆ ಎನ್ನುವದನ್ನೂ ಶಾಸ್ತ್ರ ತಿಳಿಸುತ್ತದೆ —

**ಯೋ ವಾ ನ ಕುರುತೇ ತಸ್ಯಾಂ**
**ತೈಲಸ್ನಾನಂ ವಿಮೂಢಧೀಃ**
**ಸಪ್ತಜನ್ಮದರಿದ್ರಃ ಸ್ಯಾತ್**
**ನಾರೀ ಚ ವಿಧವಾ ಭವೇತ್**

ನರಕಚತುರ್ದಶಿಯಂದು ತೈಲಾಭ್ಯಂಗವನ್ನು ಮಾಡದ ವ್ಯಕ್ತಿ ಏಳುಜನ್ಮಗಳಲ್ಲಿ ದಾರಿದ್ರ್ಯವನ್ನು ಪಡೆಯುತ್ತಾನೆ, ಹೆಣ್ಣುಮಕ್ಕಳು ವೈಧವ್ಯವನ್ನು ಪಡೆಯುತ್ತಾರೆ.

## ಯಾರು ಮಾಡಬಾರದು?

ನರಕಚತುರ್ದಶಿಯಂದು ಮನೆಯಲ್ಲಿ ಶ್ರಾದ್ಧವಿದ್ದರೆ, ಹಾಗೂ ಸೂತಕವಿದ್ದವರು ಅಭ್ಯಂಗವನ್ನು ಮಾಡಬಾರದು.

### ಇದಕ್ಕೆ ಪ್ರಮಾಣವೇನು?

> **ದಂತಧಾವನತಾಂಬೂಲೇ**
> **ತೈಲಾಭ್ಯಂಗಂ ದ್ವಿಭೋಜನಮ್ ।**
> **ರತ್ಯೌಷಧಿಪರಾನ್ನಂ ಚ**
> **ಶ್ರಾದ್ಧಕರ್ತಾ ವಿವರ್ಜಯೇತ್ ।।**

ಶ್ರಾದ್ಧವನ್ನು ಮಾಡುವ ಕರ್ತೃ, ದಂತಧಾವನ, ತಾಂಬೂಲಭಕ್ಷಣ, ಅಭ್ಯಂಗ, ಎರಡು ಬಾರಿ ಊಟ, ಮೈಥುನ, ಔಷಧಿಸೇವನ, ಪರಾನ್ನ ಇವಿಷ್ಟನ್ನು ಮಾಡಬಾರದು.

ಹೀಗೆ ಶ್ರಾದ್ಧದ ದಿವಸ ಅಭ್ಯಂಗ ಮಾಡಬಾರದು ಎನ್ನುವ ವಚನವೇ ಪ್ರಮಾಣ. ಆ ನಿಯಮವನ್ನು ಇಲ್ಲಿ ಪಾಲಿಸುವಂತಿಲ್ಲ ಎಂಬ ವಚನವಿಲ್ಲ-ದಿರುವದರಿಂದ.

ಮೇಲಿನ ವರಾಹಪುರಾಣದ ವಚನದಲ್ಲಿ ಅಭ್ಯಂಗಕ್ಕೆ ನಿಷಿದ್ಧವಾದ ಸಂಕ್ರಾಂತಿ, ವ್ಯತೀಪಾತ, ದರ್ಶ, ನಿಷಿದ್ಧವಾರ, ದಿನಕ್ಷಯಗಳಲ್ಲಿ ನರಕಚತುರ್ದಶಿ ಬಂದರೆ ಅಭ್ಯಂಗ ಮಾಡಬೇಕೆಂದಿದೆ. ಆದರೆ ಶ್ರಾದ್ಧವಿದ್ದರೂ ಮಾಡಬೇಕು ಎಂದಿಲ್ಲ. ಹೀಗಾಗಿ ಶ್ರಾದ್ಧದ ದಿವಸ ಅಭ್ಯಂಗ ಮಾಡಬಾರದು ಎಂಬ ನಿಯಮ ಹಾಗೆಯೇ ಉಳಿಯುತ್ತದೆ[5].

ಶ್ರಾದ್ಧವಿದ್ದಾಗ ಮನೆಯ ಮುಂದೆ ತೋರಣ ಕಟ್ಟುವಂತಿಲ್ಲ, ರಂಗವಲ್ಲಿ ಹಾಕುವಂತಿಲ್ಲ, ಮನೆಯಲ್ಲಿ ಯಾರೂ ಎಣ್ಣೆ ಸ್ನಾನ ಮಾಡುವದಿಲ್ಲ[6].

---

[5] ಧರ್ಮಶಾಸ್ತ್ರದ ವಿದ್ಯಾರ್ಥಿಗಳು ಇಲ್ಲಿ ಸ್ಪಷ್ಟವಾಗಿ ಗಮನಿಸಿ. ಶ್ರಾದ್ಧಕರ್ತೃಗಳು ಅಭ್ಯಂಗವನ್ನು ಮಾಡಬಾರದು ಎಂದು ಯುಕ್ತಿಯಿಂದ ಸಮರ್ಥಿಸುತ್ತಿಲ್ಲ. ಶ್ರಾದ್ಧಕರ್ತೃಗಳು ಅಭ್ಯಂಗ ಮಾಡಬಾರದು ಎನ್ನುವ ನಿಷೇಧಕ್ಕೆ ಮತ್ತೆ ನಿಷೇಧವಿಲ್ಲ.  ಆದರೆ, ಇಂತಿಂತಹ ದಿವಸಗಳಲ್ಲಿ ಅಭ್ಯಂಗ ಮಾಡಬಾರದು ಎನ್ನುವ ನಿಷೇಧಕ್ಕೆ ಮತ್ತೆ ನಿಷೇಧವಿದೆ. ಆದ್ದರಿಂದ ವಾರದೋಷಾದಿಗಳು ಇದ್ದರೂ ನರಕಚತುರ್ದಶಿಯಂದು ಅಭ್ಯಂಗ ಮಾಡಬಹುದು. ಆದರೆ ಶ್ರಾದ್ಧಕರ್ತೃಗಳು ಮಾಡುವಂತಿಲ್ಲ.

[6] ಕರ್ತೃ ಮತ್ತು ಆತನ ಹೆಂಡತಿ ಇಬ್ಬರೂ ತಲೆಸ್ನಾನ ಮಾಡಲೇಬೇಕು. ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವಂತಿಲ್ಲ.

ಹಾಗೆಯೇ ಸೂತಕದಲ್ಲಿ ಸಹಿತ ಯಾವ ಹಬ್ಬ ಮತ್ತು ವ್ರತದ ಆಚರಣೆ ಮಾಡಲು ಬರುವ-ದಿಲ್ಲವಾದ್ದರಿಂದ ಸೂತಕವಿದ್ದವರು ಅಭ್ಯಂಗವನ್ನು ಮಾಡಬಾರದು.

## ಅಭ್ಯಂಗದ ಕಾಲ

ನರಕಚತುರ್ದಶಿಯಂದು ಮಾಡುವ ಅಭ್ಯಂಗ ಕೇವಲ ದೇಹಶುದ್ಧಿಗಾಗಿ ಅಥವಾ ಹಬ್ಬದ ಸಂಭ್ರಮಕ್ಕಾಗಿ ಅಲ್ಲ. ಪಾಪಗಳ ಪರಿಹಾರಕ್ಕಾಗಿ ಮತ್ತು ನರಕದ ಭಯನಿವೃತ್ತಿಗಾಗಿ.

ಹೀಗಾಗಿ ಯಾವ ಸಮಯದಲ್ಲಿ ಮಾಡಬೇಕು ಎಂದು ಧರ್ಮಶಾಸ್ತ್ರಗಳು ವಿಧಿಸಿವಿಯೋ ಅದೇ ಸಮಯದಲ್ಲಿಯೇ ಅಭ್ಯಂಗವನ್ನು ಮಾಡಬೇಕು.

ಶ್ರೀಕೃಷ್ಣಾಚಾರ್ಯರು ಉದಾಹರಿಸಿರುವ ಸ್ಮೃತಿ ಹೀಗಿದೆ —

**ಪೂರ್ವವಿದ್ಧಚತುರ್ದಶ್ಯಾಂ**
**ಕಾರ್ತಿಕಸ್ಯಾಸಿತೇ ಪರೇ**
**ಪಕ್ಷೇ ಪ್ರತ್ಯೂಷಸಮಯೇ**
**ಸ್ನಾನಂ ಕುರ್ಯಾತ್ ಪ್ರಯತ್ನತಃ**

ಈ ವಚನದಿಂದ ಸಿದ್ಧವಾಗುವ ತತ್ವಗಳಿಷ್ಟು —

ತ್ರಯೋದಶಿಯಿಂದ ವಿದ್ಧವಾದ ಚತುರ್ದಶಿಯೇ ಅಭ್ಯಂಗಕ್ಕೆ ಶ್ರೇಷ್ಠ.

ಯಾವ ದಿವಸ ಅರುಣೋದಯ ಕಾಲದಲ್ಲಿ ಚತುರ್ದಶಿ ಇದೆಯೋ ಆ ದಿವಸ ಅರುಣೋದಯಕಾಲದಲ್ಲಿಯೇ ಅಭ್ಯಂಗ.

ಎರಡು ದಿವಸಗಳಲ್ಲಿ ಈ ಯೋಗವಿದ್ದರೆ ಮೊದಲ ಚತುರ್ದಶಿಯೇ ನರಕಚತುರ್ದಶೀ. ಆ ದಿವಸವೇ ಆಭ್ಯಂಗ.

ಅರುಣೋದಯ ಎಂದರೆ ಸೂರ್ಯೋದಯಕ್ಕಿಂತ ಮುಂಚಿನ 96 ನಿಮಿಷಗಳು.

ಅರುಣೋದಯದಲ್ಲಿಯೂ ಚಂದ್ರೋದಯವಾದನಂತರವೇ ಅಭ್ಯಂಗ.

ಸಾಮಾನ್ಯವಾಗಿ ಕೃಷ್ಣಪಕ್ಷದ ಚತುರ್ದಶಿಯಲ್ಲಿ ಅರುಣೋದಯದ ಸಮಯಕ್ಕೆ ಚಂದ್ರೋದಯವಾಗುತ್ತದೆ. ಕೃಷ್ಣಪಕ್ಷದ ಅಷ್ಟಮಿಯಲ್ಲಿ ಮಧ್ಯರಾತ್ರಿಗೆ ಚಂದ್ರೋದಯ.

ಹಾಗೇ ಮುಂದುವರೆದು ಚತುರ್ದಶಿಯ ಸಮಯಕ್ಕೆ ಅರುಣೋದಯದಲ್ಲಿ ಚಂದ್ರೋದಯ.

ಹೀಗಾಗಿ ಅರುಣೋದಯಕ್ಕಿಂತ ಮುಂಚೆಯೇ ಎದ್ದು ದೇವರಿಗೆ ಗುರುಗಳಿಗೆ ನಮಸ್ಕರಿಸಿ ಎಣ್ಣೆ ಹಚ್ಚಿಕೊಂಡು ಚಂದ್ರೋದಯವಾಗುತ್ತಿದ್ದಂತೆ ಸ್ನಾನ ಮಾಡಬೇಕು.

ಈ ಅಭ್ಯಂಗವನ್ನು ಸೂರ್ಯೋದಯವಾದ ನಂತರ ಮಾಡಿದರೆ, ಅಥವಾ ನರಕ ಚತುರ್ದಶಿ ಬಿಟ್ಟು ಬೇರೆ ಚತುರ್ದಶಿಗಳಂದು ಅಭ್ಯಂಗ ಮಾಡಿದರೆ ಒಂದು ವರ್ಷದಲ್ಲಿ ಸಂಪಾದಿಸಿದ ಪುಣ್ಯಗಳು ವಿನಾಶವಾಗುತ್ತವೆ.

**ಅರುಣೋದಯತೋಽನ್ಯತ್ರ**
**ರಿಕ್ತಾಯಾಂ ಸ್ನಾತಿ ಯೋ ನರಃ**
**ತಸ್ಯಾಬ್ದಿಕಭವೋ ಧರ್ಮೋ**
**ನಶ್ಯತ್ಯೇವ ನ ಸಂಶಯಃ.**

ಅದಕ್ಕಾಗಿಯೇ ಮೇಲಿನ ವಚನದಲ್ಲಿ ಪ್ರಯತ್ನತಃ ಎಬ ಮಾತಿದೆ. ಪ್ರಯತ್ನಪಟ್ಟು ಸೂರ್ಯೋದಯಕ್ಕೆ ಮುಂಚೆಯೇ ಸ್ನಾನಮಾಡಬೇಕು ಎಂದು ಅದರರ್ಥ.

## ಅಭ್ಯಂಗದ ಕ್ರಮ

ನರಕಚತುರ್ದಶಿಯಂದು ಸೂರ್ಯೋದಯಕ್ಕಿಂತ ಎರಡು ಗಂಟೆ ಮುಂಚೆಯೇ ಎದ್ದು  ಒಮ್ಮೆ ಸ್ನಾನವನ್ನು ಮುಗಿಸಿ ನಿರ್ಮಾಲ್ಯವಿಸರ್ಜನೆಯನ್ನು ಮಾಡಿ ದೇವರ ಪ್ರತಿಮೆ ಸಾಲಿಗ್ರಾಮಗಳಿಗೆ, ಶಿವಲಿಂಗಗಳಿಗೆ,  ಗುರುಗಳ ವೃಂದಾವನಗಳಿಗೆ ಎಣ್ಣೆಯನ್ನು ಹಚ್ಚಿ, ಸೀಗೇಪುಡಿಯಿಂದ ತಿಕ್ಕಿ, ಬಿಸಿನೀರಿನಿಂದ ಅಭಿಷೇಕವನ್ನು ಮಾಡಿಸಬೇಕು.

ಆ ನಂತರ ದೇವರಿಗೆ ಮಂಗಳಾರತಿಯನ್ನು ಮಾಡಿ ಪರಮಾತ್ಮನಿಗೆ ಸಮರ್ಪಿಸಿದ ಹಾಗೂ ರುದ್ರಾದಿ ದೇವತೆಗಳಿಗೆ ಸಮರ್ಪಿಸಿ ಉಳಿದ ಎಣ್ಣೆ, ಸೀಗೆಪುಡಿಗಳಿಂದ ನಾವು ಅಭ್ಯಂಗ ಆಚರಿಸಬೇಕು[7].

**ಈ ರೀತಿಯಾಗಿ ಮಾಡಲು ಶಕ್ತಿ ಇಲ್ಲದವರು ದೇವರ ಮುಂದೆ ಎಣ್ಣೆ ಸೀಗೆಕಾಯಿಗಳನ್ನಿಟ್ಟು**

[7] ದೇವರಿಗೆ, ಪ್ರಾಣದೇವರಿಗೆ ಎಣ್ಣೆಯಿಂದ ಅಭಿಷೇಕ ಮಾಡಿ ಆ ಆಭಿಷೇಕದ ಎಣ್ಣೆಯನ್ನೇ ನಾವು ಹಚ್ಚಿಕೊಳ್ಳಬೇಕು. ರುದ್ರಾದಿದೇವತೆಗಳಿಗೆ ಸಮರ್ಪಿಸಿದ್ದನ್ನು ನಾವು ಹಚ್ಚಿಕೊಳ್ಳುವಂತಿಲ್ಲ. ಹೀಗಾಗಿ ಅವರಿಗೆ ಸಮರ್ಪಿಸಿ ಉಳಿದ ಎಣ್ಣೆಯನ್ನು ಹಚ್ಚಿಕೊಳ್ಳಬೇಕು.

**ಮನಸ್ಸಿನಿಂದ ಅವನ್ನು ಸಮರ್ಪಿಸಿ, ಮಾನಸಿಕವಾಗಿ ಅಂತರ್ಯಾಮಿಗೆ ಆಭ್ಯಂಗ ಮಾಡಿಸಿ ನಂತರ ಆ ಎಣ್ಣೆಯಿಂದ ಅಭ್ಯಂಗ ಮಾಡಬೇಕು.**

ಮೊದಲಿಗೆ ಮನೆಯ ಹಿರಿಯರನ್ನು ಮಣೆಯ ಮೇಲೆ ಕೂಡಿಸಿ, ಅವರಿಗೆ ಸಿಂಧೂರದ ತಿಲಕವನ್ನಿಟ್ಟು ಆರತಿ ಮಾಡಿ ಅವರಿಗೆ ಆ ದೇವರಪ್ರಸಾದವಾದ ಎಣ್ಣೆಯನ್ನು ಹಚ್ಚಬೇಕು. ಆ ನಂತರ ವಯಸ್ಸಿನ ಕ್ರಮದಲ್ಲಿ ಒಬ್ಬೊಬ್ಬರಿಗೂ ಎಣ್ಣೆಯನ್ನು ಮೈಗೆಲ್ಲ ಹಚ್ಚಿಕೊಂಡು ನಂತರ ಹಿಂದಿನ ದಿವಸ ಪೂಜೆ ಮಾಡಿದ ಹಂಡೆಯಲ್ಲಿನ ಬಿಸಿನೀರಿನಿಂದ ಸ್ನಾನವನ್ನು ಮಾಡಬೇಕು.

## ಸ್ನಾನ ಮಾಡುವ ಕ್ರಮ

ಸ್ನಾನ ಮಾಡುವ ಮಧ್ಯದಲ್ಲಿ ಉತ್ತಾರಣಿಕಡ್ಡಿಯನ್ನು ಹಿಡಿದು ಮೇಲಕ್ಕೆತ್ತಿ ತಿರುಗಿಸಬೇಕು.

ಪದ್ಮಪುರಾಣದಲ್ಲಿ ಈ ವಿಶೇಷದ ಉಲ್ಲೇಖವಿದೆ —

**ಅಪಾಮಾರ್ಗಮಥೋ ತುಂಬೀಂ**
**ಪ್ರಪುನ್ನಾಟಮಥಾಪರಮ್**
**ಭ್ರಾಮಯೇತ್ ಸ್ನಾನಮಧ್ಯೇ ತು**
**ನರಕಸ್ಯ ಕ್ಷಯಾಯ ವೈ**

ಸ್ನಾನ ಮಾಡುವ ಮಧ್ಯದಲ್ಲಿ ಉತ್ತರಾಣಿ ಕಡ್ಡಿಯನ್ನು ತಿರುಗಿಸುವದರಿಂದ ನರಕವಿನಾಶವಾಗುತ್ತದೆ.

ತಿರುಗಿಸಬೇಕಾದರೆ ಹೇಳಬೇಕಾದ ಮಂತ್ರವನ್ನೂ ಶಾಸ್ತ್ರ ತಿಳಿಸುತ್ತದೆ —

**ಸೀತಾಲೋಷ್ಟಸಮಾಯುಕ್ತ**
**ಸಕಂಟಕದಲಾನ್ವಿತ**
**ಹರ ಪಾಪಮಪಾಮಾರ್ಗ**
**ಭ್ರಾಮ್ಯಮಾಣಃ ಪುನಃಪುನಃ**

ನೇಗಿಲಿನ ಮಣ್ಣಿನಿಂದ ಕೂಡಿದ, ಮುಳ್ಳು ಎಲೆಗಳಿಂದ ಕೂಡಿದ ಅಪಾಮಾರ್ಗದಲ್ಲಿ ಸನ್ನಿಹಿತರಾದ ದೇವತೆಗಳೇ, ನನ್ನ ಪಾಪವನ್ನು ವಿನಾಶಮಾಡಿ. ಮುಂದೆ ಪಾಪವನ್ನು ಮಾಡದಂತೆ ಅನುಗ್ರಹಿಸಿ ಎಂದು ಪ್ರಾರ್ಥಿಸಬೇಕು.

ಹೀಗೆ ಸ್ನಾನವನ್ನು ಮುಗಿಸಿ ಹೊಸದಾದ ಬಟ್ಟೆಯನ್ನುಟ್ಟು ದೇವರ ಮನೆಯ ಮುಂದೆ ಕುಳಿತು ಪರಮಾತ್ಮ ನರಕಾಸುರನನ್ನು ಸಂಹಾರ ಮಾಡಿ ಹದಿನಾರುಸಾವಿರ ಸ್ತ್ರೀಯರನ್ನು ರಕ್ಷಣೆ ಮಾಡಿದ ಪರಮಮಂಗಳ ಪ್ರಸಂಗವನ್ನು ಶ್ರವಣ ಮಾಡಬೇಕು.

## ಮಹಾಲಕ್ಷ್ಮಿಯ ವಿಶೇಷ ಪೂಜೆ

ಆ ನಂತರ ಮತ್ತೊಮ್ಮೆ ಸ್ನಾನವನ್ನು ಮಾಡಿ ದೇವರಪೂಜೆಯನ್ನು ಮಾಡಬೇಕು. ನರಕಚತುರ್ದಶಿಯಂದು ವಿಶೇಷವಾಗಿ ಮಹಾಲಕ್ಷ್ಮೀದೇವಿಗೆ ವಿಶೇಷ ಪೂಜೆಯನ್ನು ಮಾಡಿ ಆರತಿಯನ್ನು ಸಮರ್ಪಿಸಬೇಕು, ಅದರಿಂದ ಸಕಲ ಸಂಪತ್ತುಗಳೂ ದೊರೆಯುತ್ತವೆ ಎಂದು ಶ್ರೀ ಕೃಷ್ಣಾಚಾರ್ಯರು ತಿಳಿಸುತ್ತಾರೆ —

**ನೀರಾಜಿತೋ ಯದಾ ಲಕ್ಷ್ಮೀಂ**
**ಅರ್ಚಯೇತ್ ಸುಸಮಾಹಿತಃ**
**ಸರ್ವಸಂಪದಮಾಪ್ನೋತಿ**
**ಲಕ್ಷ್ಮೀಸ್ತತ್ರೈವ ತಿಷ್ಠತಿ**

ಅಭ್ಯಂಜನವನ್ನು ಮುಗಿಸಿ, ಮನೆಯ ಹೆಣ್ಣುಮಕ್ಕಳಿಂದ ಆರತಿಯನ್ನು ಮಾಡಿಸಿಕೊಂಡು ಮಹಾಲಕ್ಷ್ಮೀದೇವಿಯನ್ನು ಅರ್ಚಿಸಿದಲ್ಲಿ ಸಕಲ ಸಂಪತ್ತನ್ನೂ ಪಡೆಯುತ್ತಾನೆ, ಅವರ ಮನೆಯಲ್ಲಿ ಮಹಾಲಕ್ಷ್ಮಿ ಸ್ಥಿರವಾಗಿ ನಿಲ್ಲುತ್ತಾಳೆ.

ಮತ್ತೂ ಈ ದಿವಸವೇ ಲಕ್ಷ್ಮೀಪೂಜೆ ಯಾಕಾಗಿ ಎನ್ನುವ ಕಾರಣಕ್ಕೂ ಸಹ ಶ್ರೀ ಕೃಷ್ಣಾಚಾರ್ಯರು ಅಪೂರ್ವವಾದ ಪ್ರಮೇಯವನ್ನು ಪುರಾಣವಚನಗಳ ಆಧಾರದಿಂದ ತಿಳಿಸುತ್ತಾರೆ —

**ತದಾನೀಂ ತು ರಮಾ ದೇವೀ**
**ಸಮುತ್ತಿಷ್ಠತಿ ತಲ್ಪತಃ**
**ತತೋ ನೀರಾಜನಂ ತಸ್ಯಾಃ**
**ಕುರ್ವೀತ ವಿಧಿವನ್ನರಃ**
**ನ ಕರೋತಿ ಚ ಯೋ ಮೋಹಾತ್**
**ತಸ್ಯ ಲಕ್ಷ್ಮೀಃ ಪ್ರಕುಪ್ಯತಿ**

ಆಷಾಢದ ಏಕಾದಶಿಯಂದು ಯೋಗನಿದ್ರೆಯನ್ನು ಅರಂಭಿಸುವ ನಮ್ಮ ಸ್ವಾಮಿ ಉತ್ಥಾನದ್ವಾದಶಿಯಂದು ಎದ್ದೇಳುತ್ತಾನೆ. ಗಂಡ ಏಳುವದಕ್ಕಿಂತ ಮುಂಚೆ ಏಳುವದು ಪತ್ನಿಯ ಕರ್ತವ್ಯ. ಹೀಗಾಗಿ ಮಹಾಲಕ್ಷ್ಮೀದೇವಿ ಕಾರ್ತೀಕ ಕೃಷ್ಣ ಚತುರ್ದಶಿಯಂದು ಶಯನದಿಂದ ಎದ್ದೇಳುತ್ತಾಳೆ. ಆಗ ತಾನೇ ಎದ್ದ ಆ ಸೌಭಾಗ್ಯದೇವಿಗೆ ಮನುಜರು ವಿಧಿವತ್ತಾದ ಕ್ರಮದಲ್ಲಿ ಆರತಿಯನ್ನು ಮಾಡಬೇಕು.

ಇದೆಲ್ಲ ಪುರಾಣಗಳ ಕಟ್ಟುಕತೆ ಎಂದೋ, ಅಥವಾ ಬೇರೆ ಯಾವುದೋ ಕಾರಣದಿಂದ ಯಾರು ಮಹಾಲಕ್ಷ್ಮೀಗೆ ಈ ದಿವಸ ನೀರಾಜನ ಅರ್ಚನೆಗಳನ್ನು ಅರ್ಪಿಸುವದಿಲ್ಲವೋ ಅವರು ಲಕ್ಷ್ಮೀಕೋಪಕ್ಕೆ ತುತ್ತಾಗುತ್ತಾರೆ.

ಯಮತರ್ಪಣ ಮತ್ತು ದೀಪದಾನದ ಕುರಿತು ಮುಂದಿನ ಲೇಖನದಲ್ಲಿ ತಿಳಿಸುತ್ತೇನೆ.

ಯಾವ ಸಜ್ಜನನಿಗೂ ನರಕಪ್ರಾಪ್ತಿಯಾಗದಿರಲಿ, ನಿಮ್ಮ ಮನೆಯಲ್ಲಿ ಸದಾ ಸಾತ್ವಿಕ ಸಂಪತ್ತು ತುಂಬಿರಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491